ಮಾಡಬೇಕಾಗಿತ್ತು. ಅಲ್ಲಿ ಎಷ್ಟು ಸ್ಟಾಫ್ ಇದ್ದಾರೆ, ಏನೇನು ಆಸ್ತಿಗಳಿವೆ ಇತ್ಯಾದಿ ವಿವರಗಳನ್ನು ಒಳಗೊಂಡ ಪಟ್ಟಿ ಈಗ ಬಂದಿದೆ. ನಾನು ಈಗ ತಾನೇ ಅಧಿವೇಶನಕ್ಕೆ ಬರುವುದಕ್ಕಿಂತ ಮೊದಲು ಅವರ ಸಂಬಳ ಮತ್ತು ಇತರೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಅನುಮೋದನೆ ಕೊಟ್ಟು ಹೌಸ್‌ಗೆ ಬಂದಿದ್ದೇನೆ.

ಉಪಾಧ್ಯಕ್ಷರು : ಈಗ 11 ರಿಂದ 15ರವರೆಗಿನ ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳಲಾಗುವುದು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಾನ್ಯ ಸಚಿವರು ಸಭೆಯ ಮುಂದಿಡಬೇಕು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 17ನೇ ಜುಲೈ 2003ರಂದು ಲಿಖಿತ ಮೂಲಕ ಉತ್ತರಿಸುವ 100 ಪ್ರಶ್ನೆಗಳ ಪೈಕಿ 65 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ-1)

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇತ್ತು ನಾನು ಇಲ್ಲಿ ಫಿಸಿಕಲ್ಲಾಗಿ ಪ್ರೆಸೆಂಟ್ ಆಗಿದ್ದೇನೆ. ನಾನು ಇಲ್ಲವೆಂದು ಅದು ಪೋಸ್ಟ್‌ಪೋನ್ ಆಯಿತಾ?

ಉಪಾಧ್ಯಕ್ಷರು : ಅದನ್ನು ಮುಂದಿನ ವಾರ ತೆಗೆದುಕೊಳ್ಳಲಾಗುವುದು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ವಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆ ಸಚಿವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(1) 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ 14(2)ರ ಪ್ರಕರಣದ ಮೇರೆಗೆ:

1. 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮದಲ್ಲಿ ನಿಯಮಗಳನ್ನು ರಚಿಸಿ, ದಿನಾಂಕ 26.7.1999 ರಂದು ಹೊರಡಿಸಲಾದ ಇಡಿ:51:ವಿವಿಧ:99ನೇ ಸಂಖ್ಯೆಯ ಅಧಿಸೂಚನೆ;

(2) 1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ 1) (4)ರ ಪ್ರಕರಣದ ಮೇರೆಗೆ:

2. ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳಲ್ಲಿರುವ ನೌಕರರ ಸೇವಾ ನೇಮಕಾತಿ ಮತ್ತು ನಿಬಂಧನೆಗಳು ಹಾಗೂ ಷರತ್ತುಗಳು) ನಿಯಮಗಳು 1999ರ ಅನುಬಂಧ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20.6.2003 ರಂದು ಹೊರಡಿಸಲಾದ ಇಡಿ:80:ವಿವಿಧ:2002ನೇ ಸಂಖ್ಯೆಯ ಅಧಿಸೂಚನೆ;

3. ಶಿಕ್ಷಣ ಇಲಾಖೆಯಲ್ಲಿರುವ ಅಧಿಕಾರಿಗಳನ್ನು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಸಕ್ರಮ ಪ್ರಾಧಿಕಾರದ ಕಾರ್ಯ ನಿರ್ವಹಣೆ ಮತ್ತು ಕರ್ತವ್ಯ ಪರಿಪಾಲನೆಗಾಗಿ ಸಕ್ಷಮ ಪ್ರಾಧಿಕಾರಗಳನ್ನಾಗಿ ನೇಮಿಸಿ ದಿನಾಂಕ 16.12.1998 ರಂದು ಹೊರಡಿಸಲಾದ ಇಡಿ:136:ವಿವಿಧ:98ನೇ ಸಂಖ್ಯೆಯ ಅಧಿಸೂಚನೆ;
4. ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವರ್ಗವಾರು ಕರ್ತವ್ಯ ನಿರ್ವಹಣೆಯಲ್ಲಿ ಅಧಿಕಾರ ನೀಡಿ ದಿನಾಂಕ 25.2.1999 ರಂದು ಹೊರಡಿಸಲಾದ ಇಡಿ:146:ವಿವಿಧ:95ನೇ ಸಂಖ್ಯೆಯ ಅಧಿಸೂಚನೆ;
5. ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಟ್ಯೂಟೋರಿಯಲ್ ಸಂಸ್ಥೆಗಳಲ್ಲಿ ನೋಂದಣಿ ಪ್ರಾಧಿಕಾರದ ಕರ್ತವ್ಯ ನಿರ್ವಹಣೆಯಲ್ಲಿ ಅಧಿಕಾರ ನೀಡಿ ದಿನಾಂಕ 5.5.2003 ರಂದು ಹೊರಡಿಸಲಾದ ಇಡಿ:43:ವಿವಿಧ:2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

ಉಪಾಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ನಾವೆಲ್ಲಾ ವಿರೋಧ ಪಕ್ಷದ ಸದಸ್ಯರು ತಕರಾರು ಮಾಡಿದಾಗ ಯಾವ ಮಂತ್ರಿಗಳು ಸದನದಲ್ಲಿ ಇರುವುದಿಲ್ಲ ಅವರ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಇನ್ನು ಮುಂದೆ ಅವಕಾಶ ಕೊಡುವುದಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಭರವಸೆ ಕೊಟ್ಟರು. ದಯಮಾಡಿ ಕೊನೇ ಪಕ್ಷ ಈ ವಿಧಾನ ಸಭೆಗೆ ಒಂದೂವರೆ ವರ್ಷ ಜೀವ ಇದೆ. ಈಗಲೇ ಸುತ್ತು ಹೋದರೆ ಹೇಗೆ? ನಮಗೆ ಅರ್ಥವಾಗುವುದಿಲ್ಲ. ಮಂತ್ರಿಗಳು ಬರುವುದಿಲ್ಲ ಸದನದಲ್ಲಿ ಮಂತ್ರಿಗಳೊಬ್ಬರು ನಿಂತು ಎಲ್ಲರ ಪರವಾಗಿ ಉತ್ತರ ಕೊಡುವುದು, ನಿನ್ನೆ ನಮ್ಮಂತಹವರು ಮಾತನಾಡುವ ಸಂದರ್ಭದಲ್ಲಿ ಕೂಡ ಏನಾದರೂ ಒಳ್ಳೆಯ ಸಲಹೆ ಮಾಡೋಣ ಎಂದರೆ ಮೊದಲನೇ ಸಾಲಿನಲ್ಲಿ ಎರಡನೇ ಸಾಲಿನಲ್ಲಿ ಪೂರ್ತಿ ಖಾಲಿ. ನಾವು ಹೇಳಿ ಹೇಳಿ ನಮಗೆ ಬೇಸರವಾಗಿದೆ. ಈಗ ನಾವೂ ಎದ್ದು ಹೋಗಬೇಕಾಗುತ್ತದೆ. ಅಷ್ಟೆ ನಮಗೆ ಇನ್ನು ಉಳಿದಿರುವುದು. ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಯಾವ ಗೌರವಾನ್ವಿತ ಮಂತ್ರಿಗಳು ಗಂಭೀರವಾಗಿ ಬಂದಿದ್ದಾರೆ ಅವರಿಗೆ ಅವಕಾಶ ಮಾಡಿ ಕೊಡಿ.

ಶ್ರೀ ಡಿ.ವಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳುವ ಪ್ರಿನ್ಸಿಪಲ್ ನಾವು ಒಪ್ಪುತ್ತೇವೆ. ಅನೇಕ ಸಂದರ್ಭಗಳಲ್ಲಿ ಪೇಪರ್ಸ್ ಲೇ ಮಾಡುವಾಗ ಜಂಟಿ ಜವಾಬ್ದಾರಿ ಇರುತ್ತದೆ. ಒಬ್ಬರು ಇಲ್ಲದೆ ಇರುವಾಗ ಇನ್ನೊಬ್ಬರು ಮಾಡುವುದು ಅವರ ಕಾಲದಲ್ಲಿ ನಡೆದಿದೆ, ನಮ್ಮ ಕಾಲದಲ್ಲಿ ಮುಂದುವರೆಸಿದ್ದೇವೆ ಅಷ್ಟೇ. ನಾವು ಹೊಸದಾಗಿ ಮಾಡಿಲ್ಲ. ಮುಂದುವರೆದ ಪದ್ಧತಿಯಲ್ಲಿ ಶ್ರೀ ಎಂ.ಎಂ. ನಾಣಯ್ಯನವರು ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪ ಸಭಾಧ್ಯಕ್ಷರು : ಸ್ವತಃ ಸಭಾ ನಾಯಕರೇ ಈ ರೀತಿ ಹೇಳಿದ್ದಾರೆಂಬ ಮಾತನ್ನು ಹೇಳಿದ್ದರಿಂದ ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ಆಗಬಹುದು.

ಉಪಾಧ್ಯಕ್ಷರು : ಶ್ರೀ ಎಂ.ಎಂ. ನಾಣಯ್ಯ ನವರದ್ದನ್ನು ಯಾರೂ ಮಾಡಲಿಲ್ಲ.